ಓ. ಎಸ್ . 137/2020 ಪಿ.ಡಬ್ಲ್ಯೂ - 1 ಶಿವಾನಂದ ದೇವರಮನಿ

**(ದಿನಾಂಕಃ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ಕೆ ಪಿ ಎಸ್ ವಕೀಲರಿಂದ -**

ನಾನು ಈ ದಾವೆಯಲ್ಲಿ 3ನೇ ವಾದಿ ಇದ್ದು ಈ ಹಿಂದೆ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದಕ್ಕೆ ನಾನು ಮಾಹಿತಿ ನೀಡಿ ಸಹಿ ಮಾಡಿರುತ್ತೇನೆ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಉತಾರ (RTC) ಗಳನ್ನು ಹಾಜರು ಮಾಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ-1 ರಿಂದ 13 ಎಂದು ಗುರುತಿಸಲಾಯಿತು. ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ಹಾಜರ ಮಾಡಿದ್ದು ಅದನ್ನು ನಿ.ಪಿ-14 ಎಂದು ಗುರುತಿಸಲಾಯಿತು. ಸರ್ವೆ ನಂ. 120/15 ರ ಜಮೀನಿನ ಪಹಣಿಯನ್ನು ನಿ.ಪಿ-15 ಎಂದು ಗುರುತಿಸಲಾಯಿತು.

ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟಿ ಸವಾಲು : ಪ್ರತಿವಾದಿಗಳ ಪರ ಶ್ರೀ ಐ ಕೆ ಎಚ್ ವಕೀಲರಿಂದ -**

ಸರ್ವೆ ನಂ. 112, 167/1/5, 120/12ಅ, 120/5ಅ, 120/5ಬಿ ಇವುಗಳಲ್ಲಿ ಮಹಾಲಿಂಗಪ್ಪ , ನಿರ್ವಾಣಿ , ಶಿವಲಿಂಗ ಇವರಿಗೆ ತಲಾ 1/3 ಹಿಸ್ಸಾ ಇದೆ ಎಂದರೆ ನಿಜ. ಸರ್ವೆ ನಂ. 120/5ಕ, 123/5, 123/3, 120/17, 120/10, 120/15, 120/2ಬ , 120/18 , 123/4 ರ ಇವುಗಳಲ್ಲಿ ಮಹಾಲಿಂಗಪ್ಪ , ನಿರ್ವಾಣಿ , ಶಿವಲಿಂಗ ಇವರಿಗೆ ತಲಾ 1/6 ಹಿಸ್ಸಾ ಇದೆ ಎಂದರೆ ನಿಜ ಹಾಗೂ 8, 9, 10ನೇ ಪ್ರತಿವಾದಿಗಳಿಗೆ ತಲಾ 1/6 ಹಿಸ್ಸಾ ಇದೆ ಎಂದರೆ ನಿಜ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**(ಆದಿತ್ಯ ಆರ್. ಕಲಾಲ್)**
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**